ಓ.ಎಸ್. ನಂ. 175/2017

ಡಿ.ಡಬ್ಲ್ಯು: 01 (ತಿಪ್ಪೇರುದ್ರಪ್ಪ)

ದಿನಾಂಕ: 25.07.2025 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.

ಪಾಟೀ ಸವಾಲು: ವಾದಿ ಪರ – ಶ್ರೀ ಆರ್ ಆರ್ ವಕೀಲರಿಂದ.

ನಾನು ನಿವೃತ್ತ ಶಿಕ್ಷಕ. ಚನ್ನಬಸಪ್ಪನ ಹಿರಿಯ ಮಗನ ಹೆಸರು ವೀರಪ್ಪ ಅಲಿಯಾಸ್ ಜಿಡ್ಡಪ್ಪ, 2 ನೇ ಮಗನ ಹೆಸರು ಸಣ್ಣವೀರಪ್ಪ ಅಲಿಯಾಸ್ ವೀರಪ್ಪ. ನಾನು ಸಣ್ಣವೀರಪ್ಪ ಅಲಿಯಾಸ್ ವೀರಪ್ಪ ಅವರ ಹೆಂಡತಿಯ ತಮ್ಮ. ಸಣ್ಣವೀರಪ್ಪ ಅಲಿಯಾಸ್ ವೀರಪ್ಪ ಮತ್ತು ವೀರಪ್ಪ ಅಲಿಯಾಸ್ ಜಿಡ್ಡಪ್ಪ ನನಗೆ ಮಾವಂದಿರು ಎಂದರೆ ಹೌದು. 1977 ರಲ್ಲಿ ನನ್ನ ಅಕ್ಕನನ್ನು ಸಣ್ಣವೀರಪ್ಪ ಅಲಿಯಾಸ್ ವೀರಪ್ಪ ಮದುವೆ ಮಾಡಿಕೊಟ್ಟಿರುತ್ತೇವೆ ಅದಕ್ಕಿಂತ ಮೊದಲು ನನಗೆ ಅವರ ಪರಿಚಯ ಮತ್ತು ಸಂಬಂಧ ಇಲ್ಲ.

ಸಣ್ಣವೀರಪ್ಪ ಅಲಿಯಾಸ್ ವೀರಪ್ಪರವರು ಹಿರೇಹೆಗ್ಡಾಳ್ ಗ್ರಾಮದವರು, ನನ್ನದು ಮಹದೇವಪುರ ಆಗಿತ್ತು. 1977 ರಲ್ಲಿ ಚನ್ನಬಸಪ್ಪನ ಮಕ್ಕಳು ಪ್ರತ್ಯೇಕವಾಗಿದ್ದರೆ ಎಂದರೆ ಬೇರೆ ಬೇರೆಯಾಗಿದ್ದರು. ಸಾಕ್ಷಿ ಮುಂದುವರೆದು ಆಸ್ತಿ ಬೇರೆಯಾಗಿರಲಿಲ್ಲ. ನನ್ನ ಸಮಕ್ಷಮ ಪಾಲುವಿಭಾಗ ಮಾಡಿಕೊಂಡಿರುವುದಿಲ್ಲ. ಚನ್ನಬಸಪ್ಪನ ಮಕ್ಕಳು ಸರ್ವೇಯರ್ ಮೂಲಕ ಆಸ್ತಿಯನ್ನು ಹಂಚಿಕೊಂಡ ಬಗ್ಗೆ ನನಗೆ ಗೊತ್ತಿಲ್ಲ. ಸಾಕ್ಷಿ ಮುಂದುವರೆದು 1989 ರಲ್ಲಿ ಚನ್ನಬಸಪ್ಪ ಅವರ ಮಕ್ಕಳು ಆಸ್ತಿ ವಿಭಾಗ ಮಾಡಿಕೊಂಡಿರುತ್ತಾರೆ, ಆದರೆ ಆ ಸಮಯದಲ್ಲಿ ನಾನು ಇರಲಿಲ್ಲ. ಅವರಿಬ್ಬರು ಯಾವ ಆಸ್ತಿಯನ್ನು ಹಂಚಿಕೊಂಡರು ಎಂದು ನನಗೆ ಖುದ್ದಾಗಿ ಗೊತ್ತಿಲ್ಲ ಎಂದರೆ ದಾಖಲಾತಿಯಲ್ಲಿ ಯಾವುದು ಹಂಚಿಕೊಂಡಿದ್ದಾರೆ ಎಂದು ನನಗೆ ಗೊತ್ತಿಲ್ಲ, ಸಾಗುವಳಿ ಆಧಾರದ ಮೇಲೆ ನನಗೆ ಗೊತ್ತಿದೆ. ಅವರ ಕುಟುಂಬಕ್ಕೆ ಎಷ್ಟು ಆಸ್ತಿ ಇತ್ತು, ಅವುಗಳ ಸರ್ವೆ ನಂಬರ್ ನನಗೆ ಗೊತ್ತಿಲ್ಲ. ಹಾಗಾಗಿ ನನಗೆ ಅವರ ಆಸ್ತಿಗಳ ಬಗ್ಗೆ ಹಾಗೂ ಯಾವ ಆಸ್ತಿಗಳನ್ನು ಎಷ್ಟು ಎಷ್ಟು ಹಂಚಿಕೊಂಡು ಎಂದು ನನಗೆ ನಿಖರವಾಗಿ ಗೊತ್ತಿಲ್ಲ ಎಂದರೆ ಹೌದು.

ಚನ್ನಬಸಪ್ಪ ಅವರ ಮಕ್ಕಳ ಚುನಾವಣಾ ಗುರುತಿನ ಚೀಟಿ, ಶಾಲಾ ದಾಖಲಾತಿ, ಪಾಸ್ ಪುಸ್ತಕ ಹಾಗೂ ಆಧಾರ್ ಕಾರ್ಡುಗಳ ವಿವರ ನನಗೆ ಗೊತ್ತಿಲ್ಲ. ಅವುಗಳಲ್ಲಿ ಅವರ ಹೆಸರು ಏನಿದೆ ಎಂದು ನನಗೆ ಗೊತ್ತಿಲ್ಲ. ಎಲ್ಲ ದಾಖಲಾತಿಯಲ್ಲೂ ನನ್ನ ಅಕ್ಕನ ಗಂಡನ ಹೆಸರು ಸಣ್ಣವೀರಣ್ಣ ಅಲಿಯಾಸ್ ವೀರಪ್ಪ ಎಂದು ಇದೆ. ಸದರಿ ದಾಖಲಾತಿಗಳು ನನ್ನ ಬಳಿ ಇವೆ. ಸದರಿ ದಾಖಲಾತಿಯಲ್ಲಿ ಅಲಿಯಾಸ್ ವೀರಪ್ಪ ಎಂದು ಎಲ್ಲಿಯಾದರೂ ಬರೆದಿದೆಯೇ ಎಂದರೆ ಹೆಚ್ಚಾಗಿ ಸಣ್ಣವೀರಣ್ಣ ಎಂದು ಬರೆದಿದೆ, ಕೆಲವೊಂದರಲ್ಲಿ ಅಲಿಯಾಸ್ ವೀರಪ್ಪ ಎಂದು ಬರೆದಿದೆ. ಚುನಾವಣಾ ಗುರುತಿನ ಚೀಟಿ ಸಣ್ಣವೀರಣ್ಣ ಎಂದು ಇದೆ.

ವಾದಿಗೆ ಚನ್ನಬಸಪ್ಪನ ಮೊದಲನೆಯ ಮಗ ಸರ್ವೆ ನಂಬರ್ 798 ಎಪ್‌ರಲ್ಲಿ 2.38 ಎಕರೆಯನ್ನು ಮಾರಾಟ ಮಾಡಿದ್ದಾರೆ ಎಂದರೆ ಹೌದು. ಆ ಸಮಯದಲ್ಲಿ ನನ್ನ ಅಕ್ಕನ ಗಂಡ ಜೀವಂತ ಇದ್ದರು ಎಂದರೆ ಹೌದು. ಆ ಸಂಬಂಧ ಚನ್ನಬಸಪ್ಪನ ಮಕ್ಕಳು ನಡುವೆ ಯಾವುದೇ ತಕರಾರು, ಜಗಳ ಇರಲಿಲ್ಲ ಎಂದರೆ ಇರಲಿಲ್ಲ. ಈಗ ಚನ್ನಬಸಪ್ಪನ ಮೊದಲನೇಯ ಮಗ ಮೃತಪಟ್ಟಿದ್ದಾರೆ. 2 ನೇ ಮಗ ಜೀವಂತ ಇದ್ದಾನೆ. ಅವರಿಬ್ಬರು ಅನ್ಯೋನ್ಯವಾಗಿದ್ದರು ಎಂದರೆ ಮಾರಾಟ ಮಾಡಿದ ಜಗಳ ಆಗಿರುತ್ತದೆ. ಆ ವಿಚಾರವಾಗಿ ಚನ್ನಬಸಪ್ಪನ 2 ನೇ ಮಗ ನ್ಯಾಯಾಲಯಕ್ಕಾಗಲೀ, ಪೋಲಿಸ್ ಠಾಣೆಗಾಗಲೀ ಹೋಗಿರಲಿಲ್ಲ ಎಂದರೆ ಹೋಗಿದ್ದರು.

ಚನ್ನಬಸಪ್ಪ ಅವರ 2 ನೇ ಮಗ ಅನಧೀಕೃತವಾಗಿ ಅದನ್ನು ಮಾರಾಟ ಮಾಡಿದ್ದಾರೆ ಎಂದು ಇದೇ ನ್ಯಾಯಾಲಯದಲ್ಲಿ ದಾವೆ ಹೂಡಿರುತ್ತಾರೆ. ಅದು ಈಗ ಚಾಲ್ತಿಯಲ್ಲಿದೆ. 2013 ರ ನಂತರ ನನ್ನ ಅಕ್ಕನ ಗಂಡ ನನ್ನೊಂದಿಗೆ ಮಾತನಾಡುತ್ತಿಲ್ಲ. ಯಾವ ವಿಚಾರವಾಗಿಯೂ ಸಹ ನಮ್ಮ ಮಧ್ಯ ಮಾತಾಗಿಲ್ಲ. ನನ್ನ ಅಕ್ಕನ ಗಂಡ ಅವರ ಅಣ್ಣನ ವಿರುದ್ಧ ದಾವೆ ಹೂಡಿದ ಬಗ್ಗೆ ನನಗೆ ತಿಳಿಸಿರುತ್ತಾರೆಯೇ ಎಂದರೆ ತಿಳಿಸಿಲ್ಲ, ನನಗೆ ಹಾಗೆ ತಿಳಿದುಬಂತು. ನನಗೆ ಆಸ್ತಿ ವ್ಯವಹಾರದ ಬಗ್ಗೆ ತಿಳುವಳಿಕೆ ಇದೆ. ಆಸ್ತಿ ಖರೀದಿ ಮಾಡಿಕೊಂಡ ನಂತರ ಅದನ್ನು ನೊಂದಣಿ ಮಾಡಿಸಿಕೊಳ್ಳಬೇಕೆಂಬ ತಿಳುವಳಿಕೆ ನನಗೆ ಇದೆ ಎಂದರೆ ಇದೆ. ಯಾವ ಕಾರಣಕ್ಕೆ ಅದನ್ನು ಛಾಪಾ ಕಾಗದದ ಮೇಲೆ ಬರೆಸಿಕೊಂಡಿರುತ್ತೇನೆ ಎಂದರೆ ಅವರ ಮಗಳ ಮದುವೆಗೆ ಸಾಲ ಕೇಳಿದಾಗ ನಾನು ಹಣ ಕೊಟ್ಟು ಖರೀದಿ ಮಾಡಿರುತ್ತೇನೆ. ಸಾಕ್ಷಿ ಮುಂದುವರೆದು ಅದನ್ನು ನಾನು ನೊಂದಾಯಿತ ಖರೀದಿ ಪತ್ರದ ಮೂಲಕ ಖರೀದಿ ಮಾಡಿರುತ್ತೇನೆ. ಮಗಳ ಮದುವೆಗೆ ಅದನ್ನು ಮಾರಾಟ ಮಾಡುತ್ತಿದ್ದಾರೆ ಎಂಬ ವಿಚಾರ ಅದರಲ್ಲಿ ಬರೆದಿದೆಯೇ ಎಂದರೆ ಬರೆದಿದೆ. ನಾನು ಪ್ರಮಾಣ ಪತ್ರ ಹಾಗೂ ತಕರಾರು ಪತ್ರದಲ್ಲಿ ಈ ವಿಚಾರವನ್ನು ಕಾಣಿಸಿರುತ್ತೇನೆ. ಕರಾರು ಪತ್ರವನ್ನು ಈಗ ನೋಡುತ್ತಿದ್ದು, ಅದರಲ್ಲಿ ಮಗಳ ಮದುವೆ ಖರ್ಚಿಗೆ ಮಾರುತ್ತಿದ್ದೇನೆ ಎಂದು ಬರೆದಿಲ್ಲ. ಸಾಕ್ಷಿ ಮುಂದುವರೆದು ಕುಟುಂಬದ ಖರ್ಚಿಗಾಗಿ ಎಂದು ಬರೆದಿದೆ.

ಇಸಿ, ಹಕ್ಕು ಬದಲಾವಣೆ ವಹಿ ಮತ್ತು ಪಹಣಿಯನ್ನು ನೋಡಿ ಕರಾರು ಪತ್ರವನ್ನು ನೊಂದಣಿ ಮಾಡಿಸಿಕೊಂಡಿರುತ್ತೇನೆ ಎಂದರೆ ನೋಡಿರುತ್ತೇನೆ. ಆ ಸಮಯದಲ್ಲಿ ಸದರಿ ದಾಖಲಾತಿಗಳಲ್ಲಿ ವಾದಿಯ ಹೆಸರು ಇತ್ತು ಎಂದರೆ ಇರಲಿಲ್ಲ. ನನ್ನ ಅಕ್ಕನ ಗಂಡನಿಗೂ ಹಾಗೂ ವಾದಿಗೂ ತಾಲೂಕು ಕಚೇರಿಯಲ್ಲಿ ಹಕ್ಕು ವರ್ಗಾವಣೆ ವಿಚಾರವಾಗಿ ತಕರಾರು ಇತ್ತು ಎಂದರೆ ಇಲ್ಲ. ಎಸಿ ನ್ಯಾಯಾಲಯದಲ್ಲಿಯೂ ಸಹ ಈ ವಿಷಯವಾಗಿ ತಕರಾರು ಇತ್ತು ಎಂದರೆ ಸರಿಯಲ್ಲ. ಸಾಕ್ಷಿ ಮುಂದುವರೆದು ಕಣದ ವಿಚಾರವಾಗಿ ಇತ್ತು. ಸದರಿ ಕಣದ ಸರ್ವೆ ನಂಬರ್ ನನಗೆ ಗೊತ್ತಿಲ್ಲ. ಸದರಿ ತಕರಾರು ಯಾರ ಯಾರ ನಡುವೆ ಇತ್ತು ಎಂದರೆ ನನಗೆ ಗೊತ್ತಿಲ್ಲ.

ನಮ್ಮ ಕರಾರು ಪತ್ರಕ್ಕೆ ಮಲ್ಲಿಕಾರ್ಜುನ ಹಾಗೂ ಬಸವರಾಜ ಅವರು ಸಹಿ ಹಾಕಿರುತ್ತಾರೆ. ಬಸವರಾಜ ನನ್ನ ಅಕ್ಕನ ಮಗ. ಮಲ್ಲಿಕಾರ್ಜುನ ನನ್ನ ಸಂಬಂಧಿಕ ಎಂದರೆ ಸರಿಯಲ್ಲ. ಕರಾರು ಪತ್ರಕ್ಕೆ ನನ್ನ ಮಾವ, ನನ್ನ ಅಳಿಯರವರನ್ನು ಹೊರತುಪಡಿಸಿ ಬೇರೆ ಯಾರು ಈ ವ್ಯವಹಾರದಲ್ಲಿ ಇಲ್ಲ ಎಂದರೆ ಹೌದು.

ತಿಪ್ಪೇರುದ್ರಪ್ಪ ಮತ್ತು ಮರಬಾಳ ಸಣ್ಣವೀರಪ್ಪ ಯಾರು ಎಂದರೆ ಅವರಿಬ್ಬರು ಅಳಿಯ ಮತ್ತು ಮಾವ. ಅಂದರೆ ನಾನು ಮತ್ತು ನನ್ನ ಅಕ್ಕನ ಗಂಡ ಎಂದರೆ ಹೌದು. ಈ ದಾವೆಯನ್ನು ಹೂಡುವ ಮೊದಲು ವಾದಿಗೂ ಹಾಗೂ ನನ್ನ ಅಕ್ಕನ ಗಂಡನಿಗೂ ತಕರಾರು ಇತ್ತು ಎಂದರೆ ನನಗೆ ಗೊತ್ತಿಲ್ಲ. ನಾವು ಕರಾರು ಪತ್ರದ ಸ್ವತ್ತಿಗೆ 11ಇ ಸ್ಕೆಚ್ ಮಾಡಿಸಿರುವುದಿಲ್ಲ. ಕರಾರು ಪತ್ರದ ಸಮಯದಲ್ಲಿ ನಾನಾಗಲೀ ನನ್ನ ಅಕ್ಕನ ಗಂಡನಾಗಲೀ ಅದರ ಸ್ವಾಧೀನದಲ್ಲಿರಲಿಲ್ಲ ಎಂದರೆ ನನ್ನ ಅಕ್ಕನ ಗಂಡ ಸ್ವಾಧೀನದಲ್ಲಿದ್ದರು.

ನಾನು ನನ್ನ ಅಕ್ಕನ ಗಂಡ ಚೆನ್ನಾಗಿದ್ದ ಕಾರಣ ಸದರಿ ಕರಾರು ಪತ್ರದ ಆಧಾರದ ಮೇರೆಗೆ ಅಸಲು ದಾವೆ ಸಂಖ್ಯೆ 13/14 ನ್ನು ಇದೇ ನ್ಯಾಯಾಲಯದಲ್ಲಿ ಸಲ್ಲಿಸಿರುತ್ತೇನೆ ಎಂದರೆ ದಾವೆ ಸಲ್ಲಿಸಿರುತ್ತೇನೆ, ಆದರೆ ನಾನು ಮತ್ತು ನನ್ನ ಮಾವ ಚೆನ್ನಾಗಿರಲಿಲ್ಲ. ನನ್ನ ಮಾವ ಅದರಲ್ಲಿ ತಕರಾರು ಸಲ್ಲಿಸಿರಲಿಲ್ಲ ಎಂದರೆ ಹೌದು. ಸದರಿ ದಾವೆಯಲ್ಲಿ ಅವರಿಗೆ ನೋಟಿಸು ತಲುಪಿತ್ತು ಎಂದರೆ ನನಗೆ ಗೊತ್ತಿಲ್ಲ. ನಾನು ಮತ್ತು ನನ್ನ ಮಾವ ಶಾಮಿಲಾಗಿ ಏಕಪಕ್ಷೀಯವಾಗಿ ತೀರ್ಪು ಪಡೆದಿರುತ್ತೇನೆ ಎಂದರೆ ಸರಿಯಲ್ಲ. ನಾನು ನ್ಯಾಯಾಲಯದಿಂದ ಏನಾದರೂ ಸ್ವಾಧೀನವನ್ನು ಪಡೆದಿರುತ್ತೇನೆಯೇ ಎಂದರೆ ಹೌದು. ನಾನು ಸ್ವಾಧೀನ ಪಡೆದಿದ್ದೇನೆ ಎಂದು ಹೇಳುವ ಸಮಯದಲ್ಲಿ ವಾದಿಯೇ ಸ್ವಾಧೀನದಲ್ಲಿದ್ದು, ಈಗಲೂ ಸಹ ಆಕೆಯೇ ಸ್ವಾಧೀನದಲ್ಲಿದ್ದಾಳೆ ಎಂದರೆ ಸುಳ್ಳು.

ನಾನು ಸ್ವಾಧೀನದಲ್ಲಿದ್ದೇನೆಂದು ಹೇಳಿದ್ದ ಸಮಯದಲ್ಲಿ ಪ್ರಸ್ತುತ ದಾವೆ ಚಾಲ್ತಿಯಲ್ಲಿತ್ತು ಎಂದರೆ ಹೌದು. ನಾನು ಸ್ವಾಧೀನದಲ್ಲಿದ್ದೇನೆಂದು ಹೇಳಿದ್ದ ಸಮಯದ ಪೂರ್ವದಲ್ಲಿ ವಾದಿ ಹಾಗೂ 1 ನೇ ಪ್ರತಿವಾದಿಯ ಮಧ್ಯ ತಕರಾರು ಇತ್ತು ಎಂಬುದರ ಬಗ್ಗೆ ನನಗೆ ಗೊತ್ತಿತ್ತು ಎಂದರೆ ಹೌದು. 2014 ರಲ್ಲಿ ಈ ಬಗ್ಗೆ ನನಗೆ ಗೊತ್ತಾಯಿತು. ಅ.ದಾ. 13/2014 2014 ನೇ ಇಸವಿಯಲ್ಲಿ ಡಿಕ್ರಿಯಾಗಿರಲಿಲ್ಲ ಎಂದರೆ ಹೌದು. ನನಗೆ 2014 ರಲ್ಲಿ ಈ ವಿಚಾರ ಗೊತ್ತಾಗಿದ್ದು, ನಾನು ಈ ದಾವೆಯಲ್ಲಿ ಪಕ್ಷಗಾರನಾಗಿಲ್ಲ ಎಂದರೆ ನನ್ನ ಪರವಾಗಿ ಡಿಕ್ರಿಯಾದ ಕಾರಣ ನಾನು ಪಕ್ಷಗಾರನಾಗಿರಲಿಲ್ಲ. ವಾದಿಗೂ ಹಾಗೂ ನನ್ನ ಅಕ್ಕನ ಗಂಡನ ಮಧ್ಯ ದಾವಾ ಆಸ್ತಿಯ ವಿಚಾರವಾಗಿ ವಿವಾದ ಇದ್ದ ಬಗ್ಗೆ ನನಗೆ ಗೊತ್ತಿದ್ದರು ಯಾವ ಕಾರಣಕ್ಕೆ ಮಧ್ಯ ಬರಲಿಲ್ಲ ಎಂದರೆ ನನಗೂ ಹಾಗೂ ನನ್ನ ಅಕ್ಕನ ಗಂಡನಿಗೂ ಸರಿಯಾಗಿ ಇರಲಿಲ್ಲ. ನಾನು ಖರೀದಿ ಮಾಡಿದ್ದೇನೆ ಎಂದು ಹೇಳಿದ ಆಸ್ತಿಯ ಚೆಕ್‌ಬಂದಿ ಪೂರ್ವಕ್ಕೆ ಚಿನ್ನಪ್ಪ

ಅವರ ಆಸ್ತಿ, ಪಶ್ಚಿಮಕ್ಕೆ ಗೊಪ್ಪಲಾಪುರ ರಸ್ತೆ, ಉತ್ತರಕ್ಕೆ ಬುಳ್ಳಪ್ಪನವರ ಉಜ್ಜಪ್ಪ ಅವರ ಆಸ್ತಿ, ದಕ್ಷಿಣಕ್ಕೆ ತಿಪ್ಪಣ್ಣ ಅವರ ಆಸ್ತಿ ಇದೆ. ಅದೇ ಚೆಕ್‌ಬಂದಿ ನನ್ನ ನೊಂದಾಯಿತ ಕ್ರಯ ಕರಾರು ಪತ್ರದಲ್ಲಿದೆ ಎಂದರೆ ಹೌದು.

ನಾನು ಕ್ರಯ ಕರಾರು ಪತ್ರದ ಚೆಕ್‌ಬಂದಿ ನೋಡಿದ್ದೇನೆ. ನ್ಯಾಯಾಲಯದಲ್ಲಿ ಸದರಿ ಅಸಲು ದಾವೆಯಲ್ಲಿ ಬರೆದ ಚೆಕ್‌ಬಂದಿಯನ್ನು ನೋಡಿದ್ದೇನೆ, ಅದರ ಎಲ್ಲಾ ದಿಕ್ಕಿನ ಚೆಕ್‌ಬಂದಿಯಲ್ಲಿ ವ್ಯತ್ಯಾಸ ಇದೆ, ಆದರೆ ಈ ನನಗೆ ನೆನಪಿಲ್ಲ. ದಾವಾ ಸ್ವತ್ತಿನ ಚೆಕ್‌ಬಂದಿ ನಾನು ತಿಳಿದುಕೊಂಡಿಲ್ಲ ಹಾಗೂ ನಾನು ನೋಡಿಲ್ಲ, ನಮ್ಮ ವಕೀಲರ ಮೂಲಕ ಕೂಡಾ ತಿಳಿದುಕೊಂಡಿಲ್ಲ. ನ್ಯಾಯಾಲಯದಲ್ಲಿ ಮಾಡಿಕೊಟ್ಟ ಚೆಕ್‌ಬಂದಿಯನ್ನು ನಾನು ನೋಡಿರುವುದಿಲ್ಲ ಎಂದರೆ ಹೌದು. ಸಾಕ್ಷಿ ಈಗ ಅಮಲುಜಾರಿ ಸಂಖ್ಯೆ 16/2016 ರ ಬೇಲಿಫ್ ವರದಿಯಲ್ಲಿರುವ ಚೆಕ್‌ಬಂದಿಯನ್ನು ನಾನು ನೋಡುತ್ತಿದ್ದು ಅದನ್ನು ನಾನು ಈ ಮೊದಲು ನೋಡಿರುವುದಿಲ್ಲ.

ಅಸಲು ದಾವೆ 13/2014 ರಲ್ಲಿ ಮಾಹಿತಿಯನ್ನು ನನ್ನ ಅಳಿಯ ಎಂ ಬಸವರಾಜ ಅವರು ನೀಡಿ, ಬರೆಸಿರುತ್ತಾರೆ. ನನ್ನ ಅಳಿಯ ಅಂದರೆ ಕರಾರು ಪತ್ರದ ಸಾಕ್ಷಿದಾರ ಬಸವರಾಜ ಎಂದರೆ ಹೌದು. ನನ್ನ ಅಳಿಯ ಸದರಿ ದಾವೆಗೆ ಮಾಹಿತಿ ನೀಡಿರುವ ಕಾರಣ ನನಗೆ ಆ ದಾವೆಯ ವಿಚಾರವಾಗಿ ನನಗೇನೂ ಗೊತ್ತಿರಲಿಲ್ಲ ಎಂದರೆ ಹೌದು. ಸಾಕ್ಷಿ ಮುಂದುವರೆದು ಡಿಕ್ರಿ ನಂತರ ನನಗೆ ತಿಳಿದುಬಂತು. ನಾನು ಸಲ್ಲಿಸಿರುವ ಅಮಲುಜಾರಿ ಅರ್ಜಿಗೆ ಕೋರ್ಟ್ ಕಮಿಷನರ್ ಪ್ರಕಾಶ ಎಂಬುವವರು ಮಾಹಿತಿ ನೀಡಿರುತ್ತಾರೆ.

ಮುಂದುವರೆದ ಪಾಟೀ ಸವಾಲಿಗೆ ಸಮಯ ಕೋರಿದ್ದರಿಂದ ಮುಂದೂಡಲಾಯಿತು.

(ಮೇಲ್ಕಂಡ ಸಾಕ್ಷ್ಯವನ್ನು ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯಂತೆ ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಲಾಗಿದೆ.)

ಸಿವಿಲ್ ಜಡ್ಜ್ ಮತ್ತು ಜೆಎಂಎಫ್‌ಸಿ.,

ಕೂಡ್ಲಿಗಿ.